**4017/5073/6033/7033**

**III Semester 3 Year LL.B./VII Semester 5 Year B.A.LL.B. (Maj.-Min. System)/ B.B.A.LL.B./B.Com.LL.B. Examination, March/April 2023 (December 2022)**

**CRIMINAL LAW – II – Cr.P.C., JJ Act and P.O. Act**

Duration : 3 Hours | Max. Marks : 80

**Instructions :** 1. **Answer all five Units.**

2. **One essay type question and one short note/ problem is compulsory from each Unit.**

3. **Figures to the right indicate marks.**

4. **Answers should be written in English or Kannada completely.**

UNIT – I

Q. No. 1. a) What is arrest ? Explain the circumstances under which a person can be arrested without warrant. Marks : 10

ಬಂಧನ ಎಂದರೇನು ? ಯಾವ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯನ್ನು ಬಂಧನದ ಆದೇಶ (ವಾರೆಂಟ್) ಇಲ್ಲದೆ ದಸ್ತಗಿರಿ ಮಾಡಬಹುದು ಎಂಬುದನ್ನು ವಿವರಿಸಿ.

OR/ಅಥವಾ

Q. No. 1. a) Explain the procedure to be followed for the trial of warrant cases by magistrate. Marks : 10

ದಂಡಾಧಿಕಾರಿಗಳು ವಾರಂಟ್ ಪ್ರಕರಣಗಳನ್ನು ವಿಚಾರಣೆ ಮಾಡುವ ಪ್ರಕ್ರಿಯೆಯನ್ನು ವಿವರಿಸಿರಿ.

Q. No. 1. b) Write short notes : Marks : 6

ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

Complaint.

ಫಿರ್ಯಾದು.

OR/ಅಥವಾ

Q. No. 1. b) A police has recorded information regarding a cognizable offence in his police station diary on the basis of a phone call. Can it be regarded as FIR ? Marks : 6

ಒಬ್ಬ ಪೋಲೀಸ್ ಅಧಿಕಾರಿಯು ಒಂದು ಫೋನ್ ಕರೆಯನ್ನಾಧರಿಸಿ ಒಂದು ಸಂಜ್ಞಾರ್ಹ ಅಪರಾಧದ ಮಾಹಿತಿಯನ್ನು ಪೋಲೀಸ್ ಠಾಣಾ ಡೈರಿಯಲ್ಲಿ ನಮೂದಿಸಿಕೊಂಡಿದ್ದಾನೆ. ಇದನ್ನು ಪ್ರಥಮ ಮಾಹಿತಿ ವರದಿ ಎನ್ನಬಹುದೇ ?

P.T.O.

UNIT – II

Q. No. 2. a) Discuss the limitation on the power of Criminal Court to take cognizance of an offence. Marks : 10
ಒಂದು ಅಪರಾಧದ ಸಂಜ್ಞೆ ತೆಗೆದುಕೊಳ್ಳಲು ಅಪರಾಧಿಕ ನ್ಯಾಯಾಲಯಕ್ಕೆ ಇರುವ ಅಧಿಕಾರಗಳ ಮಿತಿಯನ್ನು ಚರ್ಚಿಸಿರಿ.

OR/ಅಥವಾ

Q. No. 2. a) What is bail ? When bail may be granted in non-bailable offences ? Marks : 10
ಜಾಮೀನು ಎಂದರೇನು ? ಜಾಮೀನು ರಹಿತ ಅಪರಾಧಗಳಲ್ಲಿ ಯಾವಾಗ ಜಾಮೀನನ್ನು ನೀಡಬಹುದು ಎಂಬುದನ್ನು ವಿವರಿಸಿ.

Q. No. 2. b) Write short notes : Marks : 6
ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

Serving of summons.
ಸಮನ್ಸ್ ಜಾರಿಗೊಳಿಸುವಿಕೆ.

OR/ಅಥವಾ

Q. No. 2. b) Charge. Marks : 6
ದೋಷಾರೋಪ.

UNIT – III

Q. No. 3. a) Discuss the provisions of Cr.P.C. relating to security for keeping peace and good behaviour. Marks : 10
ಅಪರಾಧಿಕಾ ಪ್ರಕ್ರಿಯಾ ಸಂಹಿತೆಯಲ್ಲಿನ ಶಾಂತಿ ಮತ್ತು ಸನ್ನಡತೆಯ ಭದ್ರತೆ ಕುರಿತಾದ ಉಪಬಂಧಗಳನ್ನು ಚರ್ಚಿಸಿರಿ.

OR/ಅಥವಾ

Q. No. 3. a) When can the Court tender pardon to an accused under Cr.P.C. ? Can it be revoked ? Marks : 10
ಅಪರಾಧಿಕ ಪ್ರಕ್ರಿಯಾ ಸಂಹಿತೆಯಲ್ಲಿ ನ್ಯಾಯಾಲಯವು ಆರೋಪಿಗೆ ಕ್ಷಮಾದಾನವನ್ನು ಯಾವಾಗ ನೀಡಬಹುದು ? ಈ ಕ್ಷಮಾದಾನವನ್ನು ರದ್ದುಗೊಳಿಸಬಹುದೇ ?

Q. No. 3. b) 'X' is tried for causing grievous hurt to 'Y' and convicted. 'Y' afterwards dies. Can 'X' be tried again ? Marks : 6
'X' ನನ್ನು 'Y' ಗೆ ತೀವ್ರಗಾಯ ಅಪರಾಧ ಮಾಡಿದಕ್ಕಾಗಿ ಅಧಿವಿಚಾರಣೆಗೆ ಒಳಪಡಿಸಿ ಶಿಕ್ಷೆಯನ್ನು ನೀಡಲಾಗಿದೆ. 'Y' ನು ತದನಂತರ ಮರಣವನ್ನು ಹೊಂದುತ್ತಾನೆ. ಪುನಃ 'X' ನನ್ನು ಅಧಿವಿಚಾರಣೆಗೆ ಒಳಪಡಿಸಬಹುದೇ ?

OR/ಅಥವಾ

Q. No. 3. b) Rangappa aged 65 years, intends to claim maintenance from his daughter Ramya. Advice him. Marks : 6

65 ವರ್ಷ ವಯಸ್ಸಿನ ರಂಗಪ್ಪನು ತನ್ನ ಮಗಳಾದ ರಮ್ಯಾಳಿಂದ ಜೀವನಾಂಶ ಪಡೆಯಲು ಇಚ್ಛಿಸುತ್ತಾನೆ. ಆತನಿಗೆ ಸಲಹೆ ನೀಡಿ.

## UNIT – IV

Q. No. 4. a) Discuss the provisions relating to time limitations for taking cognizance of offences. Marks : 10

ಅಪರಾಧಗಳ ಸಂಜ್ಞೆಯನ್ನು ತೆಗೆದುಕೊಳ್ಳಲು ಇರುವ ಕಾಲಮಿತಿಗೆ ಸಂಬಂಧಿಸಿದ ಉಪಬಂಧಗಳನ್ನು ಚರ್ಚಿಸಿರಿ.

OR/ಅಥವಾ

Q. No. 4. a) Explain the provisions regarding the transfer of criminal cases. Marks : 10

ಅಪರಾಧಿಕ ಪ್ರಕರಣಗಳ ವರ್ಗಾವಣೆಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

Q. No. 4. b) Write short notes on preventive action of police. Marks : 6

ಪೋಲಿಸರ ನಿರೋಧಕ (ತಡೆಯುವಿಕೆ) ಕ್ರಮ ಕುರಿತು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 4. b) 'A' is prosecuted for being in possession of certain obscene books. The magistrate acquits A, but orders that books should be confiscated and destroyed. Is this order legal ? Marks : 6

ಕೆಲವು ಅಶ್ಲೀಲ ಪುಸ್ತಕಗಳನ್ನು ಹೊಂದಿದಕ್ಕಾಗಿ 'A' ನನ್ನು ದೋಷಾರೋಪಣೆಗೆ ಒಳಪಡಿಸಲಾಯಿತು. ದಂಡಾಧಿಕಾರಿಯು 'A' ನನ್ನು ನಿರಪರಾಧಿ ಎಂದು ಬಿಡುಗಡೆಗೊಳಿಸಿದರು. ಆದರೆ ಪುಸ್ತಕಗಳನ್ನು ಮುಟ್ಟುಗೋಲು ಹಾಕಿ ಅವುಗಳನ್ನು ನಾಶಪಡಿಸಬೇಕೆಂದು ಆದೇಶಿಸಿದರು. ಈ ಆದೇಶವು ಕಾನೂನುಬದ್ಧವಾಗಿದೆಯೇ ?

## UNIT – V

Q. No. 5. a) Explain provisions under the Juvenile Justice Act, relating to rehabilitation and social reintegration of children. Marks : 10

ಮಕ್ಕಳ ಪುನರ್ವಸತಿ ಮತ್ತು ಸಮಾಜದ ಮುಖ್ಯವಾಹಿನಿಗೆ ತರುವುದಕ್ಕೆ ಬಾಲ ನ್ಯಾಯ ಅಧಿನಿಯಮದಲ್ಲಿರುವ ಉಪಬಂಧಗಳನ್ನು ವಿವರಿಸಿರಿ.

OR/ಅಥವಾ

Q. No. 5. a) Explain the powers and duties of Probation Officer. Marks : 10
ಪರಿವೀಕ್ಷಣಾ ಅಧಿಕಾರಿಯ ಅಧಿಕಾರ ಮತ್ತು ಕರ್ತವ್ಯಗಳನ್ನು ವಿವರಿಸಿರಿ.

Q. No. 5. b) Write short notes : Marks : 6
ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

Child Welfare Board.
ಬಾಲ ಕ್ಷೇಮ ಮಂಡಳಿ.

OR/ಅಥವಾ

Q. No. 5. b) Procedure in case of offender failing to observe the conditions of Bond. Marks : 6
ಮುಚ್ಚಳಿಕೆಯ ಷರತ್ತುಗಳನ್ನು ಪಾಲಿಸಲು ಅಪರಾಧಿಯು ವಿಫಲನಾದಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ.

---

4017/5073/6033/7033

# Third Semester 3 Year LL.B./VII Semester 5 Year B.A. LL.B. (Maj.-Min. System)/B.B.A. LL.B./B.Com. LL.B. Examination, Oct./Nov. 2022 (June 2022)
# CRIMINAL LAW – II – Cr. P.C. J.J. ACT AND P.O. ACT

Duration : 3 Hours | Max. Marks : 80

**Instructions :** 1. **Answer all five questions.**
**ಸೂಚನೆಗಳು :** ಎಲ್ಲಾ ಐದು ಪ್ರಶ್ನೆಗಳನ್ನು ಉತ್ತರಿಸಿರಿ.

2. **One essay type question and short note/problems is compulsory from each Unit.**
ಪ್ರತಿಯೊಂದು ಘಟಕದಿಂದ ಒಂದು ಪ್ರಬಂಧ ಸ್ವರೂಪದ ಮತ್ತು ಲಘು ಟಿಪ್ಪಣಿ ಸ್ವರೂಪದ/ಸಮಸ್ಯೆಗಳನ್ನು ಕಡ್ಡಾಯವಾಗಿ ಬರೆಯಿರಿ.

3. **Figures to the right indicate marks.**
ಬಲಕ್ಕೆ ತೋರಿಸಿರುವ ಅಂಕಿಗಳು ಅಂಕಗಳಾಗಿವೆ.

4. **Answer should be written either in English or Kannada completely.**
ಉತ್ತರಗಳನ್ನು ಸಂಪೂರ್ಣವಾಗಿ ಕನ್ನಡದಲ್ಲಾಗಲಿ ಅಥವಾ ಇಂಗ್ಲೀಷ್‌ನಲ್ಲಾಗಲಿ ಬರೆಯಬೇಕು.

## UNIT – I
## ಘಟಕ – I

Q. No. 1. a) Explain the constitution and powers of criminal court. Marks : 10
ಅಪರಾಧಿಕ ನ್ಯಾಯಾಲಯಗಳ ರಚನೆ ಮತ್ತು ಅವುಗಳ ಅಧಿಕಾರಗಳನ್ನು ವಿವರಿಸಿರಿ.

OR/ಅಥವಾ

Explain the first information report and discuss its evidentiary value.
ಪ್ರಥಮ ವರ್ತಮಾನವನ್ನು ವಿವರಿಸಿರಿ ಮತ್ತು ಅದರ ಸಾಕ್ಷೀಯ ಮೌಲ್ಯವನ್ನು ಚರ್ಚಿಸಿರಿ.

P.T.O.

Q. No. 1. b) A magistrate convicts an accused after following all procedure but without hearing the accused on sentence. Is this punishment lawfull ? Decide. Marks : 6

ಒಬ್ಬ ದಂಡಾಧಿಕಾರಿಯು ಎಲ್ಲಾ ನಿಯಮಗಳನ್ನು ಅನುಸರಿಸಿ ಶಿಕ್ಷೆಯ ಬಗ್ಗೆ ಆಪಾದಿತನಿಗೆ ಹೇಳಿಕೆಗೆ ಅವಕಾಶ ಕೊಡದೆ ಆತನಿಗೆ ಶಿಕ್ಷಾದೇಶ ನೀಡುತ್ತಾನೆ. ಈ ಶಿಕ್ಷೆಯು ಕಾನೂನು ಬದ್ಧವಾಗಿದೆಯೇ – ನಿರ್ಧರಿಸಿರಿ.

OR/ಅಥವಾ

Write a note on rules relating to search and arrest.

ಶೋಧ ಮತ್ತು ದಸ್ತಗಿರಿಗೆ ಸಂಬಂಧಿಸಿದ ನಿಯಮಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

## UNIT – II
## ಘಟಕ – II

Q. No. 2. a) What is taking cognizance of offence ? Discuss the limitations on the powers of court to take cognizance of an offence. Marks : 10

ಅಪರಾಧ ಸಂಜ್ಞೆ ತೆಗೆದುಕೊಳ್ಳುವಿಕೆ ಎಂದರೇನು ? ಒಂದು ಅಪರಾಧದ ಸಂಜ್ಞೆ ತೆಗೆದುಕೊಳ್ಳುವಲ್ಲಿ ನ್ಯಾಯಾಲಯಕ್ಕೆ ಇರುವ ಅಧಿಕಾರಗಳ ಮಿತಿಗಳನ್ನು ಚರ್ಚಿಸಿರಿ.

OR/ಅಥವಾ

"Separate charge is the rule and joinder of charge is the exception" – Comment.

''ಆರೋಪವನ್ನು ಪ್ರತ್ಯೇಕವಾಗಿ ಮಾಡುವುದು ನಿಯಮ ಮತ್ತು ಆರೋಪಗಳ ಜೋಡಿಸುವಿಕೆಯು ಒಂದು ಅಪವಾದ'' – ಈ ತತ್ವವನ್ನು ಪರಾಮರ್ಶಿಸಿರಿ.

Q. No. 2. b) 'A' commits robbery on 'B' and in doing so voluntarily causes hurt to him. Can he be separately charged and convicted for these offences in the same trial ? Decide. Marks : 6

'ಅ'ನು 'ಬ'ನ ಮೇಲೆ ದರೋಡೆ ಮಾಡುತ್ತಾನೆ ಮತ್ತು ಹಾಗೆ ಮಾಡುವಾಗ ಅವನನ್ನು ಐಚ್ಛಿಕವಾಗಿ ಗಾಯಗೊಳಿಸುತ್ತಾನೆ. ಈ ಅಪರಾಧಗಳಿಗೆ 'ಅ'ನನ್ನು ಪ್ರತ್ಯೇಕ ಆರೋಪಗಳಿಗಾಗಿ ಒಂದೇ ವಿಚಾರಣೆಯಲ್ಲಿ ಶಿಕ್ಷೆಗೆ ಗುರಿಪಡಿಸಬಹುದೇ ? ತೀರ್ಮಾನಿಸಿ.

OR/ಅಥವಾ

'A' makes an application for regular bail in the court of session. The application is rejected. Now he wants to make a fresh application for anticipatory bail under Section 438 Cr. P.C. in the High Court. Advice him.

'ಅ'ನು ಸತ್ರ ನ್ಯಾಯಾಲಯದಲ್ಲಿ ನಿಯಮಿತ ಜಾಮೀನಿಗಾಗಿ ಅರ್ಜಿ ಹಾಕಿಕೊಳ್ಳುತ್ತಾನೆ. ಆ ಅರ್ಜಿಯು ತಿರಸ್ಕಾರಗೊಳ್ಳುತ್ತದೆ. ಈಗ ಆತನು ದಂಡ ಪ್ರಕ್ರಿಯಾ ಸಂಹಿತೆಯ ಕಲಮು 438 ರಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೊಸದಾಗಿ ಉಚ್ಚ ನ್ಯಾಯಾಲಯದಲ್ಲಿ ಹಾಕಿಕೊಳ್ಳಲು ತೀರ್ಮಾನಿಸುತ್ತಾನೆ. 'ಅ'ನಿಗೆ ಸಲಹೆ ನೀಡಿ.

## UNIT – III
## ಘಟಕ – III

Q. No. 3. a) Discuss the provisions relating to the maintenance of wives, children and parents under Cr. P.C. **Marks : 10**

ದಂಡ ಪ್ರಕ್ರಿಯಾ ಸಂಹಿತೆಯಡಿಯಲ್ಲಿ ಹೆಂಡಿರು, ಮಕ್ಕಳು ಮತ್ತು ತಂದೆ ತಾಯಂದಿರುಗಳನ್ನು ಪೋಷಿಸುವ ಕುರಿತಾದ ಉಪಬಂಧಗಳನ್ನು ಚರ್ಚಿಸಿರಿ.

OR/ಅಥವಾ

Describe the provisions of Cr. P.C. relating to the security for keeping peace and good behaviour.

ಶಾಂತಿ ಪಾಲನೆ ಮತ್ತು ಒಳ್ಳೆಯ ನಡತೆಯ ಭದ್ರತೆಗೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆಯ ಉಪ ಬಂಧಗಳನ್ನು ವಿವರಿಸಿರಿ.

Q. No. 3. b) 'C' is the married daughter of 'K' and 'L' who lives in her husbands home. Now the parents 'K' and 'L' file an application before the magistrate court claiming maintenance under Section 125 of Cr. P.C. from 'C' married daughter. Decide with reasons. **Marks : 6**

'C'ಯು 'K' ಮತ್ತು 'L'ರ ವಿವಾಹಿತ ಮಗಳಾಗಿದ್ದು ತನ್ನ ಗಂಡನ ಮನೆಯಲ್ಲಿ ಜೀವಿಸುತ್ತಿದ್ದಾಳೆ. ಈಗ 'K' ಮತ್ತು 'L' ವಿವಾಹಿತ ಮಗಳಾದ 'C'ಯಿಂದ ಜೀವನಾಂಶವನ್ನು ಕೇಳಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ ಕಲಮು 125 ರಡಿಯಲ್ಲಿ ಅರ್ಜಿ ಸಲ್ಲಿಸುತ್ತಾರೆ. ಕಾರಣ ಸಹಿತ ತೀರ್ಮಾನಿಸಿರಿ.

OR/ಅಥವಾ

Write the provisions relating to judgement.

ತೀರ್ಪಿನ ಕುರಿತಾದ ಉಪಬಂಧಗಳನ್ನು ಬರೆಯಿರಿ.

## UNIT – IV
## ಘಟಕ – IV

Q. No. 4. a) Explain the provisions of Cr. P.C. relating to disposal of property. Marks : 10
ಸ್ವತ್ತಿನ ವಿಲೇವಾರಿಗೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ವಿವರಿಸಿರಿ.

OR/ಅಥವಾ

Explain the provisions relating to the suspension, remission and commutation of sentence under Cr. P.C.
ಅಪರಾಧಿಕ ಪ್ರಕ್ರಿಯಾ ಸಂಹಿತೆಯಡಿಯಲ್ಲಿ ಶಿಕ್ಷೆಯ ತಡೆಹಿಡಿಯುವಿಕೆ, ಕ್ಷಮಾಪಣೆ ಮತ್ತು ಬದಲಾವಣೆ ಮಾಡುವ ಕುರಿತು ಇರುವ ಉಪಬಂಧಗಳನ್ನು ವಿವರಿಸಿರಿ.

Q. No. 4. b) Irregular proceedings. Marks : 6
ಕ್ರಮಬದ್ಧವಲ್ಲದ ವ್ಯವಹರಣೆಗಳು.

OR/ಅಥವಾ

Plea bargaining.
ಶಿಕ್ಷೆಯ ಚೌಕಾಶಿ (ಮನವಿ ಚೌಕಾಸಿ).

## UNIT – V
## ಘಟಕ – V

Q. No. 5. a) Discuss the scope and objects of the Probation of Offenders Act, 1958. Marks : 10
1958 ರ ಅಪರಾಧಿಗಳ ಪರಿವೀಕ್ಷಣಾ ಕಾಯಿದೆಯ ವ್ಯಾಪ್ತಿ ಮತ್ತು ಉದ್ದೇಶಗಳನ್ನು ಚರ್ಚಿಸಿರಿ.

OR/ಅಥವಾ

Explain the provisions under the Juvenile Justice (Care and Protection) Act relating to rehabilitation and social integration.
ಮಕ್ಕಳ ಪುನರ್ವಸತಿ ಮತ್ತು ಸಮಾಜದ ಮುಖ್ಯವಾಹಿನಿಗೆ ತರುವುದಕ್ಕೆ ಸಂಬಂಧಿಸಿದ ಬಾಲನ್ಯಾಯ (ಕಾಳಜಿ ಮತ್ತು ರಕ್ಷಣಾ) ಅಧಿನಿಯಮದಲ್ಲಿನ ಉಪಬಂಧಗಳನ್ನು ವಿವರಿಸಿರಿ.

Q. No. 5. b) Observation homes. Marks : 6
ನಿರೀಕ್ಷಣಾ ತಾಣ/ಗೃಹ.

OR/ಅಥವಾ

Release on good behaviour.
ಸನ್ನಡತೆ ಮೇಲೆ ಬಿಡುಗಡೆ.

---

**III Semester 3 Year LL.B. Examination, April/May 2022 (Dec. 2021)**
**CRIMINAL LAW – II**
**Criminal Procedure Code 1973, Juvenile Justice (Care and Protection of Children) Act, 2000 and Probation of Offenders Act, 1958**

Duration : 3 Hours Max. Marks : 80

**Instructions : 1. Answer All five Units.**
**2. One essay type question and short note/problems is compulsory from each Unit.**
**3. Figures to the right indicate marks.**
**4. Answer should be written either in English or Kannada completely.**

UNIT – I

Q. No. 1. a) Discuss the procedure to be followed in the trial before the court of session. Marks : 10

ಸತ್ರ ನ್ಯಾಯಾಲಯದ ಮುಂದೆ ನಡೆಯುವ ಅಧಿವಿಚಾರಣೆಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಚರ್ಚಿಸಿರಿ.

OR/ಅಥವಾ

Q. No. 1. a) What is complaint ? Explain the procedure to be followed on receiving a complaint. Marks : 10

ಫಿರ್ಯಾದು ಎಂದರೇನು ? ಫಿರ್ಯಾದಿನ ಸ್ವೀಕಾರದ ನಂತರ ಅನುಸರಿಸಬೇಕಾದ ಪ್ರಕ್ರಿಯೆಯನ್ನು ವಿವರಿಸಿರಿ.

Q. No. 1. b) Write short note on : Marks : 6

ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

Rights of arrested person.

ದಸ್ತಗಿರಿಯಾದ ವ್ಯಕ್ತಿಯ ಹಕ್ಕುಗಳು.

OR/ಅಥವಾ

Q. No. 1. b) A magistrate convicts an accused person after complying with all the procedure laid down under the Cr.P.C. but without hearing the accused on the sentence. Decide the legality of order of conviction. Marks : 6

ಒಬ್ಬ ದಂಡಾಧಿಕಾರಿಯು ಅಪರಾಧಿಕ ಪ್ರಕ್ರಿಯಾ ಸಂಹಿತೆಯಡಿಯಲ್ಲಿ ಕೊಡಲ್ಪಟ್ಟಿರುವ ಎಲ್ಲಾ ಪ್ರಕ್ರಿಯೆಗಳನ್ನು ಪರಿಪಾಲಿಸಿದ ನಂತರ ಆರೋಪಿಗೆ ಶಿಕ್ಷೆ ವಿಧಿಸುತ್ತಾರೆ. ಆದರೆ ಆರೋಪಿಗೆ ಶಿಕ್ಷೆ ಕುರಿತ ಸುನಾವಣೆಗೆ ಅವಕಾಶ ನೀಡಿರಲಿಲ್ಲ. ಶಿಕ್ಷೆಯ ಆದೇಶದ ಕಾನೂನಾತ್ಮಕತೆಯನ್ನು ತೀರ್ಮಾನಿಸಿ.

## UNIT – II

Q. No. 2. a) Explain the procedure to be followed by Criminal Courts in compelling the appearance of a person. Marks : 10

ಅಪರಾಧಿಕ ನ್ಯಾಯಾಲಯಗಳಲ್ಲಿ ಒಬ್ಬ ವ್ಯಕ್ತಿಯು ಹಾಜರು ಆಗುವಂತೆ ಒತ್ತಾಯಿಸಲು ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ವಿವರಿಸಿರಿ.

OR/ಅಥವಾ

Q. No. 2. a) "For every distinct offence there is a separate charge and separate trial". – Discuss. Marks : 10

"ಪ್ರತಿಯೊಂದು ಅಪರಾಧಕ್ಕೆ ಪ್ರತ್ಯೇಕ ದೋಷಾರೋಪವಿರುತ್ತದೆ ಮತ್ತು ಪ್ರತ್ಯೇಕವಾಗಿಯೇ ವಿಚಾರಣೆಗೊಳಿಸಲ್ಪಡುತ್ತದೆ".– ಚರ್ಚಿಸಿ.

Q. No. 2. b) 'A' is accused of a theft on one occasion and causing grievous hurt on another occasion. Can 'A' be charged jointly and tried in one trial ? Give reasons. Marks : 6

'A'ಯು ಒಂದು ಸಂದರ್ಭದಲ್ಲಿ ಕಳ್ಳತನವನ್ನು ಮತ್ತು ಇನ್ನೊಂದು ಸಂದರ್ಭದಲ್ಲಿ ತೀವ್ರ ಗಾಯವನ್ನು ಮಾಡಿದ್ದಾನೆ ಎಂದು ಆರೋಪಿಸಲಾಗಿದೆ. 'A'ಯ ಮೇಲೆ ಈ ಎರಡು ಆರೋಪಗಳನ್ನು ಒಟ್ಟಿಗೆ ರಚಿಸಬಹುದೇ ಮತ್ತು ಒಂದೇ ವಿಚಾರಣೆಯಲ್ಲಿ ಕೈಗೆತ್ತಿಕೊಳ್ಳಬಹುದೇ ? ಕಾರಣ ಸಹಿತ ತಿಳಿಸಿ.

OR/ಅಥವಾ

Q. No. 2. b) 'B' is accused of an offence. The court has altered the charge. Without explaining the altered charges to him, 'B' is convicted for the said offence. Is the conviction legal ? Marks : 6

'B' ಯು ಒಂದು ಅಪರಾಧಕ್ಕಾಗಿ ಅಪಾದಿತನಾಗಿದ್ದಾನೆ. ನ್ಯಾಯಾಲಯವು ಅವನ ವಿರುದ್ಧದ ಆರೋಪವನ್ನು ಬದಲಾಯಿಸಿತು. ಬದಲಾವಣೆ ಮಾಡಿದ ಆರೋಪವನ್ನು 'B' ಗೆ ವಿವರಣೆ ನೀಡದೆ 'B' ನಿಗೆ ಆ ಅಪರಾಧಕ್ಕಾಗಿ ಶಿಕ್ಷೆ ನೀಡಲಾಯಿತು. ಈ ಶಿಕ್ಷೆಯು ಕಾನೂನು ಬದ್ಧವೇ ?

## UNIT – III

Q. No. 3. a) Explain the provisions relating to maintenance of wives and children under the Cr.P.C. Marks : 10

ಅಪರಾಧಿಕ ಪ್ರಕ್ರಿಯಾ ಸಂಹಿತೆಯಡಿಯಲ್ಲಿ ಪತ್ನಿಯರ ಹಾಗೂ ಮಕ್ಕಳ ಜೀವನಾಂಶಕ್ಕೆ ಸಂಬಂಧಪಟ್ಟ ಉಪಬಂಧಗಳನ್ನು ವಿವರಿಸಿ.

OR/ಅಥವಾ

Q. No. 3. a) Explain the form and contents of a judgement and in what manner judgement is to be delivered ? Marks : 10

ಒಂದು ತೀರ್ಪಿನ ಮಾದರಿ ಮತ್ತು ಒಳಾಂಶಗಳನ್ನು ವಿವರಿಸಿರಿ ಮತ್ತು ಯಾವ ರೀತಿಯಲ್ಲಿ ತೀರ್ಪನ್ನು ಕೊಡಬೇಕು ?

Q. No. 3. b) JMFC court convicts Suresh on his plea of guilty. Now Suresh intends to appeal against conviction. Decide. Marks : 6

ಪ್ರಥಮ ದರ್ಜೆ ನ್ಯಾಯಾಂಗ ದಂಡಾಧಿಕಾರಿ ನ್ಯಾಯಾಲಯವು ತಪ್ಪೊಪ್ಪಿಗೆಯ ಮೇಲೆ ಶಿಕ್ಷೆ ವಿಧಿಸುತ್ತದೆ. ಈಗ ಸುರೇಶ ಈ ಶಿಕ್ಷೆಯ ವಿರುದ್ಧ ಮೇಲ್ಮನವಿಯನ್ನು ಬಯಸಿದ್ದಾನೆ. ನಿರ್ಧರಿಸಿ.

OR/ಅಥವಾ

Q. No. 3. b) 'A' is charged before the court of session and convicted of the culpable Homicide of 'B'. Can 'A' be afterwords tried on the same facts for the murder of 'B' again ? Marks : 6

'A' ನು 'B' ಯ ಮಾನವ ಹತ್ಯೆಗಾಗಿ ಸತ್ರ ನ್ಯಾಯಾಲಯದಿಂದ ಆರೋಪಿತನಾಗಿದ್ದಾನೆ ಮತ್ತು ಶಿಕ್ಷೆಗೊಳಲ್ಪಟ್ಟಿದ್ದಾನೆ. ನಂತರ 'A' ನನ್ನು 'B' ನ ಕೊಲೆಗಾಗಿ ಅದೇ ವಸ್ತುಸ್ಥಿತಿಗಳ ಮೇಲೆ ಮತ್ತೆ ಅಧಿವಿಚಾರಣೆ ಮಾಡಬಹುದೇ ?

## UNIT – IV

Q. No. 4. a) Explain the provisions relating to removal of public nuisance under the Criminal Procedure Code. Marks : 10

ಸಾರ್ವಜನಿಕ ಉಪದ್ರವದ ನಿವಾರಣೆಗೆ ಸಂಬಂಧಿಸಿದಂತೆ ಅಪರಾಧಿಕ ಪ್ರಕ್ರಿಯಾ ಸಂಹಿತೆಯಲ್ಲಿರುವ ಉಪಬಂಧಗಳನ್ನು ವಿವರಿಸಿ.

OR/ಅಥವಾ

Q. No. 4. a) Explain the provisions under the Cr.P.C. relating to compounding of offences. Marks : 10

ಅಪರಾಧಿಕ ಪ್ರಕ್ರಿಯಾ ಸಂಹಿತೆಯಲ್ಲಿ ಅಪರಾಧಗಳನ್ನು ರಾಜಿಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿ.

Q. No. 4. b) Write short notes on : Marks : 6

ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

Irregular proceedings.

ಕ್ರಮಬದ್ಧವಲ್ಲದ ವ್ಯವಹರಣೆಗಳು.

OR/ಅಥವಾ

Q. No. 4. b) 'P' wants to file case against 'Q' for an offence punishable with fine only. The offence was committed two years back. Advice 'P'. Marks : 6

ದಂಡದಿಂದ ಮಾತ್ರ ಶಿಕ್ಷಿಸಬಹುದಾದ ಅಪರಾಧಕ್ಕಾಗಿ 'P' ನು 'Q' ನ ವಿರುದ್ಧ ಪ್ರಕರಣ ಹಾಕಬೇಕೆಂದಿದ್ದಾನೆ. ಅಪರಾಧವನ್ನು ಎರಡು ವರ್ಷಗಳ ಹಿಂದೆ ಮಾಡಲಾಗಿದೆ. 'P' ಗೆ ಸಲಹೆ ನೀಡಿ.

## UNIT – V

Q. No. 5. a) Explain the Constitution and powers of Juvenile Justice Board. Marks : 10

ಬಾಲನ್ಯಾಯ ಮಂಡಳಿಯ ರಚನೆ ಮತ್ತು ಅಧಿಕಾರಗಳನ್ನು ವಿವರಿಸಿರಿ.

OR/ಅಥವಾ

Q. No. 5. a) Discuss the powers of court to release offenders after admonition and on probation of good conduct. Marks : 10

ಅಪರಾಧಿಗಳನ್ನು ಛೀಮಾರಿ ನಂತರ ಹಾಗೂ ಸನ್ನಡತೆಯ ಪರಿವೀಕ್ಷಣೆಗಾಗಿ ಬಿಡುಗಡೆಗೊಳಿಸಲು ನ್ಯಾಯಾಲಯಕ್ಕಿರುವ ಅಧಿಕಾರಗಳನ್ನು ಚರ್ಚಿಸಿರಿ.

Q. No. 5. b) Write short notes : Marks : 6

ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

Bail of Juvenile in conflict with law.

ಕಾನೂನಿನ ಸಂಘರ್ಷದಲ್ಲಿ ಬಾಲಕರ ಜಾಮೀನು.

OR/ಅಥವಾ

Q. No. 5. b) Probation Officer. Marks : 6

ಪರಿವೀಕ್ಷಣಾಧಿಕಾರಿ.

4017

# Third Semester 3 Yr. LL.B. Examination, March/April 2021
## CRIMINAL LAW – II : Cr.P.C, JJ Act & P.O. Act

Duration : 3 Hours | Max. Marks : 80

**Instructions : 1. Answer any five questions from group (a) each question carries 10 marks.**

**2. Answer any five questions from group (b) each question carries 06 marks.**

**3. Answers should be written either in English or Kannada completely.**

Q. No. 1. (a) When a person can be arrested without warrant ? Marks : 10

ಒಬ್ಬ ವ್ಯಕ್ತಿಯನ್ನು ಬಂಧನಾದೇಶವಿಲ್ಲದೇ ಯಾವಾಗ ಬಂಧಿಸಬಹುದು ?

Q. No. 1. (b) 'A' an accused is charged with an offence of belonging to a gang of dacoits operating in Rajastan. He is arrested in Bengaluru. Can he be tried for the offence in the Bengaluru court. Give reasons. Marks : 6

'ಎ' ಎಂಬಾತನು ರಾಜಸ್ಥಾನದಲ್ಲಿ ಕಾರ್ಯಾಚರಿಸುವ ಡಕಾಯಿತರ ಗುಂಪಿಗೆ ಸೇರಿದ್ದಾನೆಂದು ದೋಷಾರೋಪಣೆ ಹೊರಿಸಲಾಗಿದೆ. ಆತನನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಆತನು ಎಸಗಿದ ಅಪರಾಧಕ್ಕಾಗಿ ಬೆಂಗಳೂರಿನ ನ್ಯಾಯಾಲಯದಲ್ಲಿ ಅಧಿವಿಚಾರಣೆಗೆ ಆತನನ್ನು ಗುರಿಪಡಿಸಬಹುದೇ ? ಕಾರಣ ನೀಡಿ.

Q. No. 2. (a) Explain the procedure relating to summary trials. Marks : 10

ಸಂಕ್ಷಿಪ್ತ ವಿಚಾರಣೆಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ವಿವರಿಸಿ.

Q. No. 2. (b) Raju goes to city police station of Shimoga to give information about a cognizable offence. The police officer refuses to register first information report. What is the next course of action available to Raju ? Marks : 6

ರಾಜು ಎಂಬಾತನು ಸಂಜ್ಞೇಯ ಅಪರಾಧವೊಂದರ ಬಗ್ಗೆ ಮಾಹಿತಿ ನೀಡಲು ಶಿವಮೊಗ್ಗದ ನಗರ ಪೊಲೀಸ್ ಠಾಣೆಗೆ ಹೋಗುತ್ತಾನೆ. ಅಲ್ಲಿ ಪೊಲೀಸ್ ಅಧಿಕಾರಿಯು ಪ್ರಥಮ ವರ್ತಮಾನ ವರದಿಯನ್ನು ನೋಂದಾಯಿಸಿಕೊಳ್ಳಲು ನಿರಾಕರಿಸುತ್ತಾನೆ. ರಾಜು ಮುಂದೇನು ಕ್ರಮ ಕೈಗೊಳ್ಳಬಹುದು ?

Q. No. 3. (a) Discuss the provisions relating to service of summons. Marks : 10

ಸಮನ್ಸನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಚರ್ಚಿಸಿ.

Q. No. 3. (b) 'A' makes an application for regular bail in the court of session. The application is rejected. Now he wants to make a fresh application for anticipatory bail under Section 438 of Cr.P.C. in the High Court. Advise. Marks : 6

'ಎ' ಎಂಬಾತನು ಸತ್ರ ನ್ಯಾಯಾಲಯದಲ್ಲಿ ನಿಯಮಿತ ಜಾಮೀನಿಗಾಗಿ ಅರ್ಜಿಯನ್ನು ಹಾಕುತ್ತಾನೆ. ಆ ಅರ್ಜಿಯು ತಿರಸ್ಕರಿಸಲ್ಪಡುತ್ತದೆ. ಈಗ ಆತನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 438 ರ ಅಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೊಸದಾಗಿ ಉಚ್ಚ ನ್ಯಾಯಾಲಯದಲ್ಲಿ ಹಾಕಬೇಕೆಂದು ಬಯಸಿದ್ದಾನೆ. ಅವನಿಗೆ ಸಲಹೆ ನೀಡಿ.

Q. No. 4. (a) Explain the limitation on the powers of the Magistrate to take cognizance of an offence relating to defamation and marriage. Marks : 10

ಮಾನಹಾನಿ ಹಾಗೂ ವಿವಾಹಕ್ಕೆ ಸಂಬಂಧಿಸಿದ ಅಪರಾಧಗಳನ್ನು ಸಂಜ್ಞೇಯತೆಗೆ ತೆಗೆದುಕೊಳ್ಳುವ ನ್ಯಾಯಿಕ ದಂಡಾಧಿಕಾರಿಯ ಅಧಿಕಾರದ ಮೇಲಿರುವ ಮಿತಿಗಳನ್ನು ವಿವರಿಸಿ.

Q. No. 4. (b) 'A' is accused of a theft on one occasion and of causing grievous hurt on another occasion. Two offences were included in one charge and were tried together in single trial by the Magistrate, A was convicted.

Decide the validity of the order of conviction. Marks : 6

'ಎ' ಎಂಬಾತನ ಮೇಲೆ ಒಂದು ಸಂದರ್ಭದಲ್ಲಿ ಕಳ್ಳತನದ ಆಪಾದನೆ ಹಾಗೂ ಮತ್ತೊಂದು ಸಂದರ್ಭದಲ್ಲಿ ತೀವ್ರವಾಗಿ ಗಾಯವನ್ನುಂಟು ಮಾಡಿರುವ ಆಪಾದನೆಯನ್ನು ಹೊರಿಸುತ್ತಾರೆ. ಈ ಎರಡೂ ಅಪರಾಧಗಳನ್ನು ಒಂದೇ ದೋಷಾರೋಪಣೆಯಲ್ಲಿ ಸೇರಿಸಿ, ಒಂದೇ ಅಧಿವಿಚಾರಣೆಯನ್ನು ನಡೆಸಿ 'ಎ' ಯನ್ನು ಅಪರಾಧಿ ಎಂದು ದಂಡಾಧಿಕಾರಿಯವರು ಶಿಕ್ಷಾದೇಶವನ್ನು ಹೊರಡಿಸುತ್ತಾರೆ. ಈ ಶಿಕ್ಷಾದೇಶವು ಕಾನೂನುಬದ್ಧವೇ ಎಂಬುದನ್ನು ಚರ್ಚಿಸಿ.

Q. No. 5. (a) Discuss the provisions relating to reference and revision. Marks : 10

ಉಲ್ಲೇಖ ಹಾಗೂ ಪರಿಷ್ಕರಣೆಗೆ ಸಂಬಂಧಿಸಿದ ನಿಯಮಗಳನ್ನು ಚರ್ಚಿಸಿ.

Q. No. 5. (b) A Magistrate directs 'D' to execute a bond for maintaining good behaviour for a period of two years. Discuss the validity of the order. Support your answer with legal provisions. Marks : 6

ದಂಡಾಧಿಕಾರಿಯು 'ಡಿ' ಎಂಬಾತನಿಗೆ ಸದ್ವರ್ತನೆಯನ್ನು ಕಾಪಾಡಿಕೊಳ್ಳಲು ಎರಡು ವರ್ಷಗಳ ಕಾಲಾವಧಿಗಾಗಿ ಮುಚ್ಚಳಿಕೆಯನ್ನು ಬರೆದುಕೊಡಲೇಬೇಕೆಂದು ನಿರ್ದೇಶಿಸುತ್ತಾನೆ. ಈ ಆದೇಶದ ವಿಧಿಬದ್ಧತೆಯ ಬಗ್ಗೆ ಚರ್ಚಿಸಿ. ಕಾನೂನಿನ ನಿಯಮಗಳನ್ನು ಉಲ್ಲೇಖಿಸಿ.

Q. No. 6. (a) Explain the provisions relating to tender of pardon to approver. Marks : 10

ಮಾಫಿ ಸಾಕ್ಷಿದಾರನಿಗೆ ಕ್ಷಮೆ ನೀಡುವ ಬಗ್ಗೆ ಇರುವ ನಿಯಮಗಳನ್ನು ವಿವರಿಸಿ.

Q. No. 6. (b) 'A' obtains a decree of divorce against her husband 'B' and also obtains maintenance from her husband under Sec. 125 of Cr. P.C. After 2 years she marries 'C'. Now 'B' wants to apply for cancellation of maintenance order. Advise B. Marks : 6

'ಎ' ಎಂಬಾಕೆಯು ತನ್ನ ಗಂಡ 'ಬಿ' ವಿರುದ್ಧ ವಿಚ್ಛೇದನಾ ಡಿಕ್ರಿಯನ್ನು ಪಡೆದುಕೊಳ್ಳುತ್ತಾಳೆ. ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 125 ರ ಅಡಿಯಲ್ಲಿ ಗಂಡನಿಂದ ಜೀವನಾಂಶವನ್ನು ಪಡೆದುಕೊಳ್ಳುತ್ತಾಳೆ. ಎರಡು ವರ್ಷಗಳ ನಂತರ ಆಕೆಯು 'ಸಿ' ಎಂಬಾತನನ್ನು ವಿವಾಹವಾಗುತ್ತಾಳೆ. ಈಗ 'ಬಿ' ಯು ತನ್ನ ವಿರುದ್ಧ ಹೊರಡಿಸಿರುವ ಜೀವನಾಂಶದ ಆದೇಶವನ್ನು ರದ್ದುಗೊಳಿಸಬೇಕೆಂದು ಕೋರಲು ಬಯಸಿದ್ದಾನೆ. ಆತನಿಗೆ ಸಲಹೆ ನೀಡಿ.

Q. No. 7. (a) Discuss the powers of the Supreme Court and High Courts to transfer cases and appeals. Marks : 10

ಪ್ರಕರಣ ಹಾಗೂ ಮೇಲ್ಮನವಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳ ಅಧಿಕಾರಗಳನ್ನು ಚರ್ಚಿಸಿರಿ.

Q. No. 7.(b) Write a note on :

ಒಂದು ಟಿಪ್ಪಣಿ ಬರೆಯಿರಿ :

Disposal of property. Marks : 6

ಸ್ವತ್ತಿನ ವಿಲೇವಾರಿ.

Q. No. 8. (a) Explain the powers of the Magistrate for the removal of public nuisance. Marks : 10

ಸಾರ್ವಜನಿಕ ಉಪದ್ರವವನ್ನು ನಿವಾರಿಸುವಲ್ಲಿ ದಂಡಾಧಿಕಾರಿಗೆ ಇರುವ ಅಧಿಕಾರಗಳನ್ನು ವಿವರಿಸಿ.

Q. No. 8. (b) Write a note on :

ಒಂದು ಟಿಪ್ಪಣಿ ಬರೆಯಿರಿ :

Irregular proceedings. Marks : 6

ಕ್ರಮಬದ್ಧವಲ್ಲದ ವ್ಯವಹರಣೆಗಳು.

Q. No. 9. (a) What are the salient features of the Probation of Offenders Act, 1958 ? Marks : 10

1958 ರ ಅಪರಾಧಿಗಳ ಪರಿವೀಕ್ಷಣಾ ಕಾಯಿದೆಯ ಪ್ರಮುಖ ಲಕ್ಷಣಗಳನ್ನು ಬರೆಯಿರಿ.

Q. No. 9. (b) Write a note on :

ಒಂದು ಟಿಪ್ಪಣಿ ಬರೆಯಿರಿ :

Child in need of care and protection. Marks : 6

ಪಾಲನೆ ಮತ್ತು ಸಂರಕ್ಷಣೆಯ ಅಗತ್ಯವಿರುವ ಮಗು.

Q. No. 10. (a) Explain the provisions relating to constitution, powers and functions of child welfare committee. Marks : 10

ಬಾಲ ಕ್ಷೇಮ ಸಮಿತಿಯ ರಚನೆ, ಅಧಿಕಾರ ಹಾಗೂ ಕಾರ್ಯಗಳಿಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

Q. No. 10. (b) Write a note on :

ಒಂದು ಟಿಪ್ಪಣಿ ಬರೆಯಿರಿ :

Children home and observation home. Marks : 6

ಮಕ್ಕಳ ಗೃಹ ಹಾಗೂ ವೀಕ್ಷಣೆ (ಅವಲೋಕನ) ಗೃಹ.

---

# Third Semester 3 Years LL.B. Examination, October/November 2021
## CRIMINAL LAW – II
## Cr.P.C., JJ Act and P.O. Act

Duration : 3 Hours Max. Marks : 80

**Instructions : 1. Answer any five questions from group (a), each question carries 10 marks.**
**2. Answer any five questions from group (b), each question carries 6 marks.**
**3. Answer should be written either in English or Kannada completely.**

Q. No. 1. a) Explain the provisions relating to the constitution of criminal courts in India. Marks : 10

ಭಾರತದಲ್ಲಿ ಅಪರಾಧಿಕ ನ್ಯಾಯಾಲಯಗಳ ರಚನೆಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

Q. No. 1. b) Write explanatory note on : First Information Report. Marks : 6

ವಿವರಣಾತ್ಮಕ ಟಿಪ್ಪಣಿ ಬರೆಯಿರಿ : ಪ್ರಥಮ ವರ್ತಮಾನ ವರದಿ.

Q. No. 2. a) Discuss the procedure relating to trial before court of sessions. Marks : 10

ಸತ್ರ ನ್ಯಾಯಾಲಯದ ಸಮ್ಮುಖ ನಡೆಯುವ ವಿಚಾರಣೆಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ವಿವರಿಸಿ.

Q. No. 2. b) Write explanatory note on : Complaint. Marks : 6

ವಿವರಣಾತ್ಮಕ ಟಿಪ್ಪಣಿ ಬರೆಯಿರಿ : ದೂರು.

Q. No. 3. a) What procedures have to be followed when warrant remains unexecuted ? Marks : 10

ವಾರೆಂಟು ಜಾರಿಯಾಗದಿದ್ದಾಗ ಅನುಸರಿಸಬೇಕಾದ ಪ್ರಕ್ರಿಯೆಗಳೇನು ?

Q. No. 3. b) 'A' rescues 'B' a person in lawful custody, and in doing so causes grievous hurt to 'C', a constable in whose custody 'B' was. Can 'A' be charged and tried in one trial ? Give reasons. Marks : 6

'ಸಿ' ಎಂಬ ಪೊಲೀಸನ ಕಾನೂನುಬದ್ಧ ಅಭಿರಕ್ಷೆಯಲ್ಲಿದ್ದ 'ಬಿ' ಎಂಬಾತನನ್ನು 'ಎ' ಎಂಬಾತನು ಬಿಡಿಸಿಕೊಂಡು ಹೋಗುವ ಯತ್ನದಲ್ಲಿ 'ಸಿ'ಗೆ ತೀವ್ರಗಾಯವನ್ನು ಉಂಟುಮಾಡುತ್ತಾನೆ. 'ಎ'ಯ ಮೇಲೆ ಒಂದೇ ಅಧಿವಿಚಾರಣೆಯಲ್ಲಿ ವಿಚಾರಣೆ ನಡೆಸಬಹುದೇ ? ಕಾರಣಗಳನ್ನು ನೀಡಿ.

Q. No. 4. a) Examine the scope of judicial discretion in granting bail in cases of non-bailable offences. Marks : 10

ಜಾಮೀನಾರ್ಹವಲ್ಲದ ಅಪರಾಧಗಳಲ್ಲಿ ಜಾಮೀನನ್ನು ಮಂಜೂರು ಮಾಡುವಲ್ಲಿ ನ್ಯಾಯಿಕ ವಿವೇಚನೆಯ ವ್ಯಾಪ್ತಿಯನ್ನು ಪರೀಕ್ಷಿಸಿ.

Q. No. 4. b) Raju is serving in armed force of the Union. He wants to file complaint against his wife for adultery, but he is precluded from taking leave. Advise Raju. Marks : 6

ಒಕ್ಕೂಟದ ಸೇನಾಪಡೆಯಲ್ಲಿ ರಾಜು ಎಂಬಾತನು ಸೇವೆ ಸಲ್ಲಿಸುತ್ತಿದ್ದಾನೆ. ಆತನು ತನ್ನ ಪತ್ನಿಯು ವ್ಯಭಿಚಾರ ಎಸಗಿದ್ದಾಳೆಂದು ಆಕೆಯ ವಿರುದ್ಧ ದೂರು ನೀಡಲು ಬಯಸಿದ್ದು, ಆತನಿಗೆ ರಜಾ ಮಂಜೂರು ಮಾಡಲು ನಿರಾಕರಿಸಲಾಗಿದೆ. ರಾಜುವಿಗೆ ಸಲಹೆ ನೀಡಿ.

Q. No. 5. a) Explain the provisions relating to security for good behaviour. Marks : 10

ಸನ್ನಡತೆಗಾಗಿ ಭದ್ರತೆಯನ್ನು ಒದಗಿಸುವ ಬಗ್ಗೆ ಇರುವ ನಿಯಮಗಳನ್ನು ವಿವರಿಸಿ.

Q. No. 5. b) 'A' is charged before the court of sessions and convicted of culpable homicide of 'B'. Can once again court try him for murder on the same facts for the murder of 'B'. Give reasons. Marks : 6

'ಬಿ'ಯ ಅಪರಾಧಿಕ ನರಹತ್ಯೆಗೆ ಸಂಬಂಧಿಸಿ 'ಎ'ಯು ಮೇಲೆ ದೋಷಾರೋಪಣೆ ಮಾಡಿ ಸತ್ರ ನ್ಯಾಯಾಲಯವು ಶಿಕ್ಷೆ ವಿಧಿಸುತ್ತದೆ. 'ಎ' ಯನ್ನು ಅದೇ ಸಂಗತಿಗಳ ಆಧಾರದ ಮೇಲೆ 'ಬಿ'ಯ ಕೊಲೆ ಎಸಗಿದ್ದಾನೆಂದು ಇನ್ನೊಮ್ಮೆ ಅಧಿವಿಚಾರಣೆಗೆ ಒಳಪಡಿಸಬಹುದೇ ? ಕಾರಣ ನೀಡಿ.

Q. No. 6. a) Discuss the form and contents of judgement. Marks : 10

ತೀರ್ಪಿನ ರೂಪ ಹಾಗೂ ಒಳಾಂಶಗಳನ್ನು ಚರ್ಚಿಸಿ.

Q. No. 6. b) 'A' is charged with murder and he pleaded guilty. On the basis of his plea he was convicted by the court of sessions. Now he wants to appeal on the conviction. Advise 'A'. Marks : 6

ಕೊಲೆಯ ದೋಷಾರೋಪಣೆಗೆ ಒಳಗಾದ 'ಎ'ಯು ತಾನು ಅಪರಾಧ ಎಸಗಿದ್ದಾಗಿ ತಪ್ಪೊಪ್ಪಿಕೊಳ್ಳುತ್ತಾನೆ. ಈ ತಪ್ಪೊಪ್ಪಿಗೆ ಹೇಳಿಕೆಯ ಆಧಾರದ ಮೇಲೆ 'ಎ'ಗೆ ಸತ್ರ ನ್ಯಾಯಾಲಯವು ಶಿಕ್ಷೆಯನ್ನು ವಿಧಿಸಿದೆ. ಈಗ ಆತನು ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಬಯಸಿದ್ದಾನೆ. 'ಎ'ಗೆ ಸಲಹೆ ನೀಡಿ.

Q. No. 7. a) Explain the provisions relating to time limitation for taking cognizance of an offence. Marks : 10

ಅಪರಾಧಗಳಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಳ್ಳಲು ಇರುವ ಕಾಲ ಪರಿಮಿತಿಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

Q. No. 7. b) Write short notes : Irregular proceedings. Marks : 6

ಲಘು ಟಿಪ್ಪಣಿ ಬರೆಯಿರಿ : ಕ್ರಮಬದ್ಧವಲ್ಲದ ವ್ಯವಹರಣೆಗಳು.

Q. No. 8. a) Under what circumstances preventive action can be taken by the Police. Marks : 10

ಯಾವ ಸಂದರ್ಭಗಳಲ್ಲಿ ಪೊಲೀಸರು ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳಬಹುದು ?

Q. No. 8. b) Write short notes : Compounding of offences. Marks : 6

ಲಘು ಟಿಪ್ಪಣಿ ಬರೆಯಿರಿ : ಅಪರಾಧಗಳನ್ನು ರಾಜಿ ಮಾಡಿಕೊಳ್ಳುವಿಕೆ.

Q. No. 9. a) Discuss the schemes available for rehabilitation and social reintegration of children under Juvenile Justice (Care and Protection of Children) Act, 2000. Marks : 10

ಮಕ್ಕಳ ಪುನರ್ವಸತಿ ಹಾಗೂ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2000 ಇದರಲ್ಲಿ ಇರುವ ಯೋಜನೆಗಳನ್ನು ಚರ್ಚಿಸಿ.

Q. No. 9. b) Write short notes : Child Welfare Committee. Marks : 6

ಲಘು ಟಿಪ್ಪಣಿ ಬರೆಯಿರಿ : ಬಾಲ ಕ್ಷೇಮ ಸಮಿತಿ.

Q. No. 10. a) When a court may release offenders after admonition and on probation of good conduct ? Marks : 10

ಯಾವಾಗ ನ್ಯಾಯಾಲಯವು ಅಪರಾಧಿಗಳನ್ನು ಛೀಮಾರಿಯ ನಂತರ ಮತ್ತು ಸನ್ನಡತೆಯ ಪರಿವೀಕ್ಷಣೆಗಾಗಿ ಬಿಡುಗಡೆಗೊಳಿಸಬಹುದು ?

Q. No. 10. b) Write short notes : Probation officer and his duties. Marks : 6

ಲಘು ಟಿಪ್ಪಣಿ ಬರೆಯಿರಿ : ಪರಿವೀಕ್ಷಣಾಧಿಕಾರಿ ಹಾಗೂ ಆತನ ಕರ್ತವ್ಯಗಳು.